# ಮಾನವನ ಅಭ್ಯುದಯಕ್ಕಾಗಿ ಬಸವಣ್ಣನವರ ಚಿಂತನೆಗಳು ಸರ್ವಕಾಲಕ್ಕೂ ಶ್ರೇಷ್ಠ: ಹೊರಟ್ಟಿ

12ನೇ ಶತಮಾನದಲ್ಲಿಯೇ ಸಮ ಸಮಾಜಕ್ಕಾಗಿ ಬಸವಣ್ಣನವರು ಎಲ್ಲ ವರ್ಗದವರ ಚಿಂತನೆಗಳನ್ನು ಅನುಭವ ಮಂಟಪದ ಮೂಲಕ ಜಾರಿಗೊಳಿಸುವ ವಿಚಾರಗಳು ಸಮೃದ್ಧ ಸಮಾಜ ಹಾಗೂ ಸಮ ಸಮಾಜದ ನಿರ್ಮಾಣಕ್ಕಾಗಿ ನಡೆಸಿದ ಪ್ರಯತ್ನ ಇಂದಿಗೂ ಚಿಂತನೆಯಲ್ಲಿರುವುದು ವಿಷಾಧನೀಯ ಎಂದು ಸಭಾಪತಿ ಬಸವರಾಜ ಹೊರಟ್ಟಿಯವರು 891ನೇ ಬಸವ ಜಯಂತಿಯ ದಿನದಂದು ತಮ್ಮ ಮನದಾಳದ ಮಾತುಗಳ ಮೂಲಕ "ಈ ದೇಶ ಬರೀ ಭಾರತ ಆಗದೇ ಬಸವಭಾರತವಾಗಲಿ" ಎಂದು ಆಶಿಸಿದ್ದಾರೆ.

ಸಾಂಸ್ಕೃತಿಕ ನಾಯಕ, ಕನ್ನಡ ಜಗತ್ತಿನ ಮೊದಲ ಮೇಷ್ಟ್ರು, ವಿಶ್ವಗುರು ಬಸವಣ್ಣನವರ ಆದರ್ಶಗಳು ಸರ್ವಕಾಲಕ್ಕೂ ಶ್ರೇಷ್ಠ ಅವರ ಆದರ್ಶಗಳನ್ನು ಚಿಂತನೆಗಳನ್ನು ಸಮಾಜದಲ್ಲಿ ಹಾಗೂ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡರೆ ಸಮ ಸಮಾಜ ನಿರ್ಮಾಣ ಸಾಧ್ಯ ಅಂತರಾಜ್ಯದ ಬಾಂಧವ್ಯ, ಇಡೀ ದೇಶಾಭಿಮಾನದ ಒಗ್ಗೂಡುವಿಕೆ, ಒಕ್ಕಟ್ಟಿಗೆ ಇಂತಹ ದಾರ್ಶನಿಕರ ಚಿಂತನೆಗಳು ಅತ್ಯವಶ್ಯವಾಗಿವೆ. ಅನುಭವ ಮಂಟಪದ ಮೂಲಕ ಬಸವಣ್ಣನವರು ಎಲ್ಲ ವರ್ಗದ ಹಿತ ಕಾಯುವ ಕೆಲಸವನ್ನು 12ನೇ ಶತಮಾನದಲ್ಲಿಯೇ ಆರಂಭಿಸಿದ್ದರು. ಅದೇ ಇಂದು ಪ್ರಜಾಪ್ರಭುತ್ವದ ಮೆಟ್ಟಿಲಾಗಿ ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗಗಳಾಗಿ ಕೆಲಸ ಮಾಡುತ್ತಿವೆ. ಹೀಗಾಗಿ ಬಸವಣ್ಣವರ ಆದರ್ಶಗಳು, ಚಿಂತನೆಗಳು ಕೇವಲ ಬಸವ ಜಯಂತಿಗೆ ಮೀಸಲಾಗದೇ ಅವರ ತತ್ವಾದರ್ಶಗಳನ್ನು, ಚಿಂತನೆಗಳನ್ನು, ಶ್ರೇಷ್ಠ ವಿಚಾರಗಳನ್ನು ಅಳವಡಿಸಿಕೊಳ್ಳಬೇಕು ಹೀಗಾಗಿ ಅವು ಸರ್ವಕಾಲಕ್ಕೂ ಶ್ರೇಷ್ಠ.




ಭಾರತದ ಸಂವಿಧಾನ ರಚನೆಗೂ 800 ವರ್ಷಗಳ ಹಿಂದೆ ಇಂಗ್ಲೆಂಡ್‌ನಲ್ಲಿ ಜನತಂತ್ರದ ಬುನಾದಿಯಾಗುವುದಕ್ಕೆ 100 ವರ್ಷಗಳ ಮುಂಚೆ ಅಮೇರಿಕಾ ಮತ್ತು ಫ್ರಾನ್ಸನಲ್ಲಿ ಸಮಾಜವಾದಿ ಸರ್ಕಾರಗಳು ಅಸ್ತಿತ್ವಕ್ಕೆ ಬರುವುದಕ್ಕೆ 600 ವರ್ಷಗಳ ಮುಂಚೆ ರಷ್ಯಾದಲ್ಲಿ ದುಡಿಯುವ ವರ್ಗಗಳಿಗೆ ಸ್ವಾತಂತ್ರ್ಯ ಸಿಗುವುದಕ್ಕೆ 800 ವರ್ಷಗಳ ಮುಂಚೆಯೇ ಬಸವಣ್ಣನವರು ಜನತಂತ್ರ, ಸಮಾನತೆ, ಸಾತಂತ್ರ್ಯ, ಸಮಾಜವಾದ, ಜಾತ್ಯಾತೀತತೆ, ಕಾಯಕ ಜೀವಿಗಳ ವೃತ್ತಿಘನತೆ, ಸಮಾಜಿಕ ನ್ಯಾಯ, ಕಲ್ಯಾಣರಾಜ್ಯ ಇವುಗಳನ್ನು ಒಳಗೊಂಡ ಸಂವಿಧಾನವನ್ನು 12ನೇ ಶತಮಾನದಲ್ಲಿಯೇ ಜನರಿಗೆ ತಿಳಿಸಿ ಜಾಗೃತಿಗೊಳಿಸಿ ಅನುಷ್ಠಾನಗೊಳಿಸಿದ್ದರು ಎಂಬುದನ್ನು ನಿಜಕ್ಕೂ ನಮ್ಮನ್ನು ಮೂಕವಿಸ್ಮಿತರನ್ನಾಗಿಸುತ್ತದೆ. ಕನ್ನಡದ ಉಪನಿಷತ್ತುಗಳು ಎಂದೇ ನಾವು ಭಾವಿಸುವ ವಚನಗಳು ಶರಣರ ಸಂವಿದಾನವನ್ನು ಅರುಹುತ್ತವೆ. ನಮ್ಮ ಇಂದಿನ ಸಂವಿದಾನದ ಎಲ್ಲ ಆಶಯಗಳು ಅಂದೇ ಆ ವಚನಗಳಲ್ಲಿ ಸಾಕಾರಗೊಂಡಿವೆ. ಜಗತ್ತಿನ ಮೊಟ್ಟಮೊದಲ ಜನತಂತ್ರವಾದಿ ಎಂದರೆ ಬಸವಣ್ಣನವರು. ಹಾಗೆ ನೋಡಿದರೆ ಜನತಂತ್ರದ ವ್ಯಾಖ್ಯೆ ನೀಡಿದ ಮೊದಲ ವ್ಯಕ್ತಿಯೂ ಬಸವಣ್ಣನವರೇ. ಇಂತಹ ಶ್ರೇಷ್ಠ ವಿಚಾರಗಳನ್ನು ಇಡೀ ಜಗತ್ತು ಒಪ್ಪಿಕೊಂಡು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡರೆ ಜಾಗತಿಕ ಸೌಹಾರ್ಧತೆಯನ್ನು ಮೂಡಿಸಲು ಸಾಧ್ಯ.

ಬಸವಣ್ಣನವರ 891ನೇ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸುವುದರ ಜೊತೆಗೆ ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪವನ್ನು ಮಾಡೋಣ ಅಂದಾಗ ಅದಕ್ಕೊಂದು ಮೌಲ್ಯ ಮಹತ್ವ ಬರುತ್ತದೆ. ಬಸವಣ್ಣನವರ ಜಯಂತಿ ಕೇವಲ ಆಚರಣೆಗಳಿಗೆ ಸೀಮಿತವಾಗದೇ ಬಸವ ಚಿಂತನೆಗಳನ್ನು ಪಾಲನೆ ಮಾಡುವತ್ತ ನಾವು ನೀವೆಲ್ಲ ಸಾಗೋಣ ಎಂದು ಸಭಾಪತಿ ಬಸವರಾಜ ಹೊರಟ್ಟಿಯವರು ನಾಡಿ ಜನತೆಗೆ ಕರೆ ನೀಡಿದ್ದಾರೆ.

**ಬಸವರಾಜ ಹೊರಟ್ಟಿ**
**ಸಭಾಪತಿಗಳು**

ಇಂದು ಮುಂಜಾನೆ
ನಿತ್ಯದ ವಿದ್ಯಮಾನಗಳ ನಿಮ್ಮ ಬೆಳಗಿನ ಸಂಗಾತಿ
INDU MUNJANE, Kannada Daily | ಕನ್ನಡ ದಿನಪತ್ರಿಕೆ

# ಬಸವಣ್ಣನವರ ಆದರ್ಶಗಳು ಸರ್ವಕಾಲಕ್ಕೂ ಶ್ರೇಷ್ಠ



12ನೇ ಶತಮಾನದಲ್ಲಿಯೇ ಸಮ ಸಮಾಜಕ್ಕಾಗಿ ಬಸವಣ್ಣನವರು ಎಲ್ಲ ವರ್ಗದವರ ಚಿಂತನೆಗಳನ್ನು ಅನುಭವ ಮಂಟಪದ ಮೂಲಕ ಜಾರಿಗೊಳಿಸುವ ವಿಚಾರಗಳು ಸಮೃದ್ಧ ಸಮಾಜ ಹಾಗೂ ಸಮ ಸಮಾಜದ ನಿರ್ಮಾಣಕ್ಕಾಗಿ ನಡೆಸಿದ ಪ್ರಯತ್ನ ಇಂದಿಗೂ ಚಿಂತನೆಯಲ್ಲಿರುವುದು ವಿಷಾಧನೀಯ ಎಂದು ಸಭಾಪತಿ ಬಸವರಾಜ ಹೊರಟ್ಟಿಯವರು ಇಂದು 891ನೇ ಬಸವ ಜಯಂತಿಯ ನಿಮಿತ್ತ ತಮ್ಮ ಮನದಾಳದ ಮಾತುಗಳ ಮೂಲಕ "ಈ ದೇಶ ಬರೀ ಭಾರತ ಆಗದೇ ಬಸವಭಾರತವಾಗಲಿ" ಎಂದು ಆಶಿಸಿದ್ದಾರೆ.

ಸಾಂಸ್ಕೃತಿಕ ನಾಯಕ, ಕನ್ನಡ ಜಗತ್ತಿನ ಮೊದಲ ಮೇಷ್ಟ್ರು, ವಿಶ್ವಗುರು ಬಸವಣ್ಣನವರ ಆದ-’ರ್ಶಗಳು ಸರ್ವಕಾಲಕ್ಕೂ ಶ್ರೇಷ್ಠ ಅವರ ಆದರ್ಶಗಳನ್ನು ಚಿಂತನೆಗಳನ್ನು ಸಮಾಜದಲ್ಲಿ ಹಾಗೂ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡರೆ ಸಮ ಸಮಾಜ ನಿರ್ಮಾಣ ಸಾಧ್ಯ ಅಂತರಾಜ್ಯದ ಬಾಂಧವ್ಯ, ಇಡೀ ದೇಶಾಭಿಮಾನದ ಒಗ್ಗೂಡುವಿಕೆ, ಒಕ್ಕಟ್ಟಿಗೆ ಇಂತಹ ದಾರ್ಶನಿಕರ ಚಿಂತನೆಗಳು ಅತ್ಯವಶ್ಯವಾಗಿವೆ. ಅನುಭವ ಮಂಟಪದ ಮೂಲಕ ಬಸವಣ್ಣನವರು ಎಲ್ಲ ವರ್ಗದ ಹಿತ ಕಾಯುವ ಕೆಲಸವನ್ನು 12ನೇ ಶತಮಾನದಲ್ಲಿಯೇ ಆರಂಭಿಸಿದ್ದರು. ಅದೇ ಇಂದು ಪ್ರಜಾಪ್ರಭುತ್ವದ ಮೆಟ್ಟಿಲಾಗಿ ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗಗಳಾಗಿ ಕೆಲಸ ಮಾಡುತ್ತಿವೆ. ಹೀಗಾಗಿ ಬಸವಣ್ಣವರ ಆದರ್ಶಗಳು, ಚಿಂತನೆಗಳು ಕೇವಲ ಬಸವ ಜಯಂತಿಗೆ ಮೀಸಲಾಗದೇ ಅವರ ತತ್ವಾದರ್ಶಗಳನ್ನು ಚಿಂತನೆಗಳನ್ನು, ಶ್ರೇಷ್ಠ ವಿಚಾರಗಳನ್ನು ಅಳವಡಿಸಿಕೊಳ್ಳಬೇಕು ಹೀಗಾಗಿ ಅವು ಸರ್ವಕಾಲಕ್ಕೂ ಶ್ರೇಷ್ಠ.

ಭಾರತದ ಸಂವಿಧಾನ ರಚನೆಗೂ 800 ವರ್ಷಗಳ ಹಿಂದೆ ಇಂಗ್ಲೆಂಡ್‌ನಲ್ಲಿ ಜನತಂತ್ರದ ಬುನಾದಿಯಾಗುವುದಕ್ಕೆ 100 ವರ್ಷಗಳ ಮುಂಚೆ ಅಮೇರಿಕಾ ಮತ್ತು ಫ್ರಾನ್ಸನಲ್ಲಿ ಸಮಾಜವಾದಿ ಸರ್ಕಾರಗಳು ಅಸ್ತಿತ್ವಕ್ಕೆ ಬರುವುದಕ್ಕೆ 600 ವರ್ಷಗಳ ಮುಂಚೆ ರಷ್ಯಾದಲ್ಲಿ ದುಡಿಯುವ ವರ್ಗಗಳಿಗೆ ಸ್ವಾತಂತ್ರ್ಯ ಸಿಗುವುದಕ್ಕೆ 800 ವರ್ಷಗಳ ಮುಂಚೆಯೇ ಬಸವಣ್ಣನವರು ಜನತಂತ್ರ, ಸಮಾನತೆ, ಸಾತಂತ್ರ್ಯ, ಸಮಾಜವಾದ, ಜಾತ್ಯಾತೀತತೆ, ಕಾಯಕ ಜೀವಿಗಳ ವೃತ್ತಿಘನತೆ, ಸಮಾಜಿಕ ನ್ಯಾಯ, ಕಲ್ಯಾಣರಾಜ್ಯ ಇವುಗಳನ್ನು ಒಳಗೊಂಡ ಸಂವಿಧಾನವನ್ನು 12ನೇ ಶತಮಾನದಲ್ಲಿಯೇ ಜನರಿಗೆ ತಿಳಿಸಿ ಜಾಗೃತಿಗೊಳಿಸಿ ಅನುಷ್ಠಾನಗೊಳಿಸಿದ್ದರು ಎಂಬುದನ್ನು ನಿಜಕ್ಕೂ ನಮ್ಮನ್ನು ಮೂಕವಿಸ್ಮಿತರನ್ನಾಗಿಸುತ್ತದೆ. ಕನ್ನಡದ ಉಪನಿಷತ್ತುಗಳು ಎಂದೇ ನಾವು ಭಾವಿಸುವ ವಚನಗಳು ಶರಣರ ಸಂವಿದಾನವನ್ನು ಅರುಹುತ್ತವೆ. ನಮ್ಮ ಇಂದಿನ ಸಂವಿದಾನದ ಎಲ್ಲ ಆಶಯಗಳು ಅಂ-ದೇ ಆ ವಚನಗಳಲ್ಲಿ ಸಾಕಾರಗೊಂಡಿವೆ.

**ಬಸವಣ್ಣನವರ 891ನೇ ಜಯಂತಿ ಪ್ರಯುಕ್ತ ಲೇಖನ**

ಜಗತ್ತಿನ ಮೊಟ್ಟಮೊದಲ ಜನತಂತ್ರವಾದಿ ಎಂದರೆ ಬಸವಣ್ಣನವರು. ಹಾಗೆ ನೋಡಿದರೆ ಜನತಂತ್ರದ ವ್ಯಾಖ್ಯೆ ನೀಡಿದ ಮೊದಲ ವ್ಯಕ್ತಿಯೂ ಬಸವಣ್ಣನವರೇ. ಇಂತಹ ಶ್ರೇಷ್ಠ ವಿಚಾರಗಳನ್ನು ಇಡೀ ಜಗತ್ತು ಒಪ್ಪಿಕೊಂಡು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡರೆ ಜಾಗತಿ-ಕ ಸೌಹಾರ್ಧತೆಯನ್ನು ಮೂಡಿಸಲು ಸಾಧ್ಯ.

ಬಸವಣ್ಣನವರ 891ನೇ ಜಯಂತಿಯನ್ನು ಅರ್ಥ-’ಪೂರ್ಣವಾಗಿ ಆಚ-’ರಿಸುವುದರ ಜೊತೆಗೆ ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪವನ್ನು ಮಾಡೋಣ ಅಂದಾಗ ಅದಕ್ಕೊಂದು ಮೌಲ್ಯ ಮಹತ್ವ ಬರುತ್ತದೆ. ಬಸವಣ್ಣನವರ ಜಯಂತಿ ಕೇವಲ ಆಚರಣೆಗಳಿಗೆ ಸೀಮಿತವಾಗದೇ ಬಸವ ಚಿಂತನೆಗಳನ್ನು ಪಾಲನೆ ಮಾಡುವತ್ತ ನಾವು ನೀವೆಲ್ಲ ಸಾಗೋಣ ಎಂದು ಸಭಾಪತಿ ಬಸವರಾಜ ಹೊರಟ್ಟಿಯವರು ನಾಡಿ ಜನತೆಗೆ ಕರೆ ನೀಡಿದ್ದಾರೆ.



ಬಸವರಾಜ ಹೊರಟ್ಟಿ
ಸಭಾಪತಿ, ಕರ್ನಾಟಕ ವಿಧಾನ ಪರಿಷತ್

ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ
SAMYUKTA KARNATAKA
# ಸಂಯುಕ್ತ ಕರ್ನಾಟಕ
ಕನ್ನಡಿಗರ ಸಾಕ್ಷಿಪ್ರಜ್ಞೆ
ಶತಕದತ್ತ ಓಟ... ತೊಂಬತ್ತರ ನೋಟ

## ಮಾನವನ ಅಭ್ಯುದಯಕ್ಕಾಗಿ ಬಸವಣ್ಣನವರ ಚಿಂತನೆಗಳು ಸರ್ವಕಾಲಿಕ



12ನೇ ಶತಮಾನದಲ್ಲಿಯೇ ಸಮ ಸಮಾಜಕ್ಕಾಗಿ ಬಸವಣ್ಣನವರು ಎಲ್ಲ ವರ್ಗದವರ ಚಿಂತನೆಗಳನ್ನು ಅನುಭವ ಮಂಟಪದ ಮೂಲಕ ಜಾರಿಗೊಳಿಸುವ ವಿಚಾರಗಳು ಸಮೃದ್ಧ ಸಮಾಜ ಹಾಗೂ ಸಮ ಸಮಾಜದ ನಿರ್ಮಾಣಕ್ಕಾಗಿ ನಡೆಸಿದ ಪ್ರಯತ್ನ ಇಂದಿಗೂ ಚಿಂತನೆಯಲ್ಲಿರುವುದು ವಿಷಾಧನೀಯ ಎಂದು ಸಭಾಪತಿ ಬಸವರಾಜ ಹೊರಟ್ಟಿಯವರು 891ನೇ ಬಸವ ಜಯಂತಿಯ ದಿನದಂದು ತಮ್ಮ ಮನದಾಳದ ಮಾತುಗಳ ಮೂಲಕ "ಈ ದೇಶ ಬರೀ ಭಾರತ ಆಗದೇ ಬಸವಭಾರತವಾಗಲಿ" ಎಂದು ಆಶಿಸಿದ್ದಾರೆ.

ಸಾಂಸ್ಕೃತಿಕ ನಾಯಕ, ಕನ್ನಡ ಜಗತ್ತಿನ ಮೊದಲ ಮೇಷ್ಟ್ರು, ವಿಶ್ವಗುರು ಬಸವಣ್ಣನವರ ಆದರ್ಶಗಳು ಸರ್ವಕಾಲಕ್ಕೂ ಶ್ರೇಷ್ಠ ಅವರ ಆದರ್ಶಗಳನ್ನು, ಚಿಂತನೆಗಳನ್ನು ಸಮಾಜದಲ್ಲಿ ಹಾಗೂ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡರೆ ಸಮ ಸಮಾಜ ನಿರ್ಮಾಣ ಸಾಧ್ಯ ಅಂತರಾಜ್ಯದ ಬಾಂಧವ್ಯ, ಇಡೀ ದೇಶಾಭಿಮಾನದ ಒಗ್ಗೂಡುವಿಕೆ, ಒಕ್ಕಟ್ಟಿಗೆ ಇಂತಹ ದಾರ್ಶನಿಕರ ಚಿಂತನೆಗಳು ಅತ್ಯವಶ್ಯವಾಗಿವೆ. ಅನುಭವ ಮಂಟಪದ ಮೂಲಕ ಬಸವಣ್ಣನವರು ಎಲ್ಲ ವರ್ಗದ ಹಿತ ಕಾಯುವ ಕೆಲಸವನ್ನು 12ನೇ ಶತಮಾನದಲ್ಲಿಯೇ ಆರಂಭಿಸಿದ್ದರು. ಅದೇ ಇಂದು ಪ್ರಜಾಪ್ರಭುತ್ವದ ಮೆಟ್ಟಿಲಾಗಿ ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗಗಳಾಗಿ ಕೆಲಸ ಮಾಡುತ್ತಿವೆ. ಹೀಗಾಗಿ ಬಸವಣ್ಣವರ ಆದರ್ಶಗಳು, ಚಿಂತನೆಗಳು ಕೇವಲ ಬಸವ ಜಯಂತಿಗೆ ಮೀಸಲಾಗದೇ ಅವರ ತತ್ವಾದರ್ಶಗಳನ್ನು, ಚಿಂತನೆಗಳನ್ನು, ಶ್ರೇಷ್ಠ ವಿಚಾರಗಳನ್ನು ಅಳವಡಿಸಿಕೊಳ್ಳಬೇಕು ಹೀಗಾಗಿ ಅವು ಸರ್ವಕಾಲಕ್ಕೂ ಶ್ರೇಷ್ಠ.

ಭಾರತದ ಸಂವಿಧಾನ ರಚನೆಗೂ 800 ವರ್ಷಗಳ ಹಿಂದೆ ಇಂಗ್ಲೆಂಡ್‌ನಲ್ಲಿ ಜನತಂತ್ರದ ಬುನಾದಿಯಾಗುವುದಕ್ಕೆ 100 ವರ್ಷಗಳ ಮುಂಚೆ ಅಮೇರಿಕಾ ಮತ್ತು ಫ್ರಾನ್ಸ್‌ನಲ್ಲಿ ಸಮಾಜವಾದಿ ಸರ್ಕಾರಗಳು ಅಸ್ತಿತ್ವಕ್ಕೆ ಬರುವುದಕ್ಕೆ 600 ವರ್ಷಗಳ ಮುಂಚೆ ರಷ್ಯಾದಲ್ಲಿ ದುಡಿಯುವ ವರ್ಗಗಳಿಗೆ ಸ್ವಾತಂತ್ರ್ಯ ಸಿಗುವುದಕ್ಕೆ 800 ವರ್ಷಗಳ ಮುಂಚೆಯೇ ಬಸವಣ್ಣನವರು ಜನತಂತ್ರ, ಸಮಾನತೆ, ಸ್ವಾತಂತ್ರ್ಯ, ಸಮಾಜವಾದ, ಜಾತ್ಯಾತೀತತೆ, ಕಾಯಕ ಜೀವಿಗಳ ವ್ಯತ್ತಿಘನತೆ, ಸಮಾಜಿಕ ನ್ಯಾಯ, ಕಲ್ಯಾಣರಾಜ್ಯ ಇವುಗಳನ್ನು ಒಳಗೊಂಡ ಸಂವಿಧಾನವನ್ನು 12ನೇ ಶತಮಾನದಲ್ಲಿಯೇ ಜನರಿಗೆ ತಿಳಿಸಿ ಜಾಗೃತಿಗೊಳಿಸಿ ಅನುಷ್ಠಾನಗೊಳಿಸಿದ್ದರು ಎಂಬುದನ್ನು ನಿಜಕ್ಕೂ ನಮ್ಮನ್ನು ಮೂಕವಿಸ್ಮಿತರನ್ನಾಗಿಸುತ್ತದೆ. ಕನ್ನಡದ ಉಪನಿಷತ್ತುಗಳು ಎಂದೇ ನಾವು ಭಾವಿಸುವ ವಚನಗಳು ಶರಣರ ಸಂವಿದಾನವನ್ನು ಅರುಹುತ್ತವೆ. ನಮ್ಮ ಇಂದಿನ ಸಂವಿದಾನದ ಎಲ್ಲ ಆಶಯಗಳು ಅಂದೇ ಆ ವಚನಗಳಲ್ಲಿ ಸಾಕಾರಗೊಂಡಿವೆ. ಜಗತ್ತಿನ ಮೊಟ್ಟಮೊದಲ ಜನತಂತ್ರವಾದಿ ಎಂದರೆ ಬಸವಣ್ಣನವರು. ಹಾಗೆ ನೋಡಿದರೆ ಜನತಂತ್ರದ ವ್ಯಾಖ್ಯೆ ನೀಡಿದ ಮೊದಲ ವ್ಯಕ್ತಿಯೂ ಬಸವಣ್ಣನವರೇ. ಇಂತಹ ಶ್ರೇಷ್ಠ ವಿಚಾರಗಳನ್ನು ಇಡೀ ಜಗತ್ತು ಒಪ್ಪಿಕೊಂಡು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡರೆ ಜಾಗತಿಕ ಸೌಹಾರ್ದತೆಯನ್ನು ಮೂಡಿಸಲು ಸಾಧ್ಯ.

ಬಸವಣ್ಣನವರ 891ನೇ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸುವುದರ ಜೊತೆಗೆ ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪವನ್ನು ಮಾಡೋಣ ಅಂದಾಗ ಅದಕ್ಕೊಂದು ಮೌಲ್ಯ ಮಹತ್ವ ಬರುತ್ತದೆ. ಬಸವಣ್ಣನವರ ಜಯಂತಿ ಕೇವಲ ಆಚರಣೆಗಳಿಗೆ ಸೀಮಿತವಾಗದೇ ಬಸವ ಚಿಂತನೆಗಳನ್ನು ಪಾಲನೆ ಮಾಡುವತ್ತ ನಾವು ನೀವೆಲ್ಲ ಸಾಗೋಣ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ನಾಡಿ ಜನತೆಗೆ ಕರೆ ನೀಡಿದ್ದಾರೆ.

# ಮಾನವನ ಅಭ್ಯುದಯಕ್ಕಾಗಿ ಬಸವಣ್ಣನವರ ಚಿಂತನೆಗಳು ಸರ್ವಕಾಲಕ್ಕೂ ಶ್ರೇಷ್ಠ



(ಮಹಾ ಮಾನವತಾವಾದಿ ಬಸವವಣ್ಣನವರ ೮೯೧ನೇ ಜಯಂತಿ ಪ್ರಯುಕ್ತ ಲೇಖನ)

**ಕಲ್ಯಾಣವಾಣಿ**

೧೨ನೇ ಶತಮಾನದಲ್ಲಿಯೇ ಸಮ ಸಮಾಜಕ್ಕಾಗಿ ಬಸವಣ್ಣನವರು ಎಲ್ಲ ವರ್ಗದವರ ಚಿಂತನೆಗಳನ್ನು ಅನುಭವ ಮಂಟಪದ ಮೂಲಕ ಜಾರಿಗೊಳಿಸುವ ವಿಚಾರಗಳು ಸಮೃದ್ಧ ಸಮಾಜ ಹಾಗೂ ಸಮ ಸಮಾಜದ ನಿರ್ಮಾಣಕ್ಕಾಗಿ ನಡೆಸಿದ ಪ್ರಯತ್ನ ಇಂದಿಗೂ ಚಿಂತನೆಯಲ್ಲಿರುವುದು ವಿಷಾಧನೀಯ ಎಂದು ಸಭಾಪತಿ ಬಸವರಾಜ ಹೊರಟ್ಟಿಯವರು ೮೯೧ನೇ ಬಸವ ಜಯಂತಿಯ ದಿನದಂದು ತಮ್ಮ ಮನದಾಳದ ಮಾತುಗಳ ಮೂಲಕ "ಈ ದೇಶ ಬರೀ ಭಾರತ ಆಗದೇ ಬಸವಭಾರತವಾಗಲಿ" ಎಂದು ಆಶಿಸಿದ್ದಾರೆ.


ಸಾಂಸ್ಕೃತಿಕ ನಾಯಕ, ಕನ್ನಡ ಜಗತ್ತಿನ ಮೊದಲ ಮೇಷ್ಟ್ರು, ವಿಶ್ವಗುರು ಬಸವಣ್ಣನವರ ಆದರ್ಶಗಳು ಸರ್ವಕಾಲಕ್ಕೂ ಶ್ರೇಷ್ಠ ಅವರ ಆದರ್ಶಗಳನ್ನು ಚಿಂತನೆಗಳನ್ನು ಸಮಾಜದಲ್ಲಿ ಹಾಗೂ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡರೆ ಸಮ ಸಮಾಜ ನಿರ್ಮಾಣ ಸಾಧ್ಯ ಅಂತರಾಜ್ಯದ ಬಾಂಧವ್ಯ, ಇಡೀ ದೇಶಾಭಿಮಾನದ ಒಗ್ಗೂಡುವಿಕೆ, ಒಕ್ಕಟ್ಟಿಗೆ ಇಂತಹ ದಾರ್ಶನಿಕರ ಚಿಂತನೆಗಳು ಅತ್ಯವಶ್ಯವಾಗಿವೆ. ಅನುಭವ ಮಂಟಪದ ಮೂಲಕ ಬಸವಣ್ಣನವರು ಎಲ್ಲ ವರ್ಗದ ಹಿತ ಕಾಯುವ ಕೆಲಸವನ್ನು ೧೨ನೇ ಶತಮಾನದಲ್ಲಿಯೇ ಆರಂಭಿಸಿದ್ದರು. ಅದೇ ಇಂದು ಪ್ರಜಾಪ್ರಭುತ್ವದ ಮೆಟ್ಟಿಲಾಗಿ ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗಗಳಾಗಿ ಕೆಲಸ ಮಾಡುತ್ತಿವೆ. ಹೀಗಾಗಿ ಬಸವಣ್ಣವರ ಆದರ್ಶಗಳು, ಚಿಂತನೆಗಳು ಕೇವಲ ಬಸವ ಜಯಂತಿಗೆ ಮೀಸಲಾಗದೇ ಅವರ ತತ್ವಾದರ್ಶಗಳನ್ನು ಚಿಂತನೆಗಳನ್ನು, ಶ್ರೇಷ್ಠ ವಿಚಾರಗಳನ್ನು ಅಳವಡಿಸಿಕೊಳ್ಳಬೇಕು ಹೀಗಾಗಿ ಅವು ಸರ್ವಕಾಲಕ್ಕೂ ಶ್ರೇಷ್ಠ.

ಭಾರತದ ಸಂವಿಧಾನ ರಚನೆಗೂ ೮೦೦ ವರ್ಷಗಳ ಹಿಂದೆ ಇಂಗ್ಲೆಂಡ್‌ನಲ್ಲಿ ಜನತಂತ್ರದ ಬುನಾದಿಯಾಗುವುದಕ್ಕೆ ೧೦೦ ವರ್ಷಗಳ ಮುಂಚೆ ಅಮೇರಿಕಾ ಮತ್ತು ಫ್ರಾನ್ಸನಲ್ಲಿ ಸಮಾಜವಾದಿ ಸರ್ಕಾರಗಳು ಅಸ್ತಿತ್ವಕ್ಕೆ ಬರುವುದಕ್ಕೆ ೬೦೦ ವರ್ಷಗಳ ಮುಂಚೆ ರಷ್ಯಾದಲ್ಲಿ ದುಡಿಯುವ ವರ್ಗಗಳಿಗೆ ಸ್ವಾತಂತ್ರ್ಯ ಸಿಗುವುದಕ್ಕೆ ೮೦೦ ವರ್ಷಗಳ ಮುಂಚೆಯೇ ಬಸವಣ್ಣನವರು ಜನತಂತ್ರ, ಸಮಾನತೆ, ಸಾತಂತ್ರ್ಯ, ಸಮಾಜವಾದ, ಜಾತ್ಯಾತೀತತೆ, ಕಾಯಕ ಜೀವಿಗಳ ವೃತ್ತಿಘನತೆ, ಸಮಾಜಿಕ ನ್ಯಾಯ, ಕಲ್ಯಾಣರಾಜ್ಯ ಇವುಗಳನ್ನು ಒಳಗೊಂಡ ಸಂವಿಧಾನವನ್ನು ೧೨ನೇ ಶತಮಾನದಲ್ಲಿಯೇ ಜನರಿಗೆ ತಿಳಿಸಿ ಜಾಗೃತಿಗೊಳಿಸಿ ಅನುಷ್ಠಾನಗೊಳಿಸಿದ್ದರು ಎಂಬುದನ್ನು ನಿಜಕ್ಕೂ ನಮ್ಮನ್ನು ಮೂಕವಿಸ್ಮಿತರನ್ನಾಗಿಸುತ್ತದೆ.

ಕನ್ನಡದ ಉಪನಿಷತ್ತುಗಳು ಎಂದೇ ನಾವು ಭಾವಿಸುವ ವಚನಗಳು ಶರಣರ ಸಂವಿದಾನವನ್ನು ಅರುಹುತ್ತವೆ.

ನಮ್ಮ ಇಂದಿನ ಸಂವಿದಾನದ ಎಲ್ಲ ಆಶಯಗಳು ಅಂದೇ ಆ ವಚನಗಳಲ್ಲಿ ಸಾಕಾರಗೊಂಡಿವೆ. ಜಗತ್ತಿನ ಮೊಟ್ಟಮೊದಲ ಜನತಂತ್ರವಾದಿ ಎಂದರೆ ಬಸವಣ್ಣನವರು. ಹಾಗೆ ನೋಡಿದರೆ ಜನತಂತ್ರದ ವ್ಯಾಖ್ಯೆ ನೀಡಿದ ಮೊದಲ ವ್ಯಕ್ತಿಯೂ ಬಸವಣ್ಣನವರೇ. ಇಂತಹ ಶ್ರೇಷ್ಠ ವಿಚಾರಗಳನ್ನು ಇಡೀ ಜಗತ್ತು ಒಪ್ಪಿಕೊಂಡು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡರೆ ಜಾಗತಿಕ ಸೌಹಾರ್ಧತೆಯನ್ನು ಮೂಡಿಸಲು ಸಾಧ್ಯ. ಬಸವಣ್ಣನವರ ೮೯೧ನೇ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸುವುದರ ಜೊತೆಗೆ ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪವನ್ನು ಮಾಡೋಣ ಅಂದಾಗ ಅದಕ್ಕೊಂದು ಮೌಲ್ಯ ಮಹತ್ವ ಬರುತ್ತದೆ.

ಬಸವಣ್ಣನವರ ಜಯಂತಿ ಕೇವಲ ಆಚರಣೆಗಳಿಗೆ ಸೀಮಿತವಾಗದೇ ಬಸವ ಚಿಂತನೆಗಳನ್ನು ಪಾಲನೆ ಮಾಡುವತ್ತ ನಾವು ನೀವೆಲ್ಲ ಸಾಗೋಣ ಎಂದು ಸಭಾಪತಿ ಬಸವರಾಜ ಹೊರಟ್ಟಿಯವರು ನಾಡಿ ಜನತೆಗೆ ಕರೆ ನೀಡಿದ್ದಾರೆ.



**–ಬಸವರಾಜ ಹೊರಟ್ಟಿ ಸಭಾಪತಿಗಳು,**

**ಕರ್ನಾಟಕ ವಿಧಾನ ಪರಿಷತ್ತು ಬೆಂಗಳೂರು.**